

## ಪ್ರಾರ್ಥನೆ

### ಶ್ರೀಮಹಾಗಣೇಶ ಪಂಚರತ್ನ ಸ್ತೋತ್ರದಿಂದ

ಸಮಸ್ತಲೋಕಶಂಕರಂ ನಿರಸ್ತದೈತ್ಯ ಕುಂಜರಂ
ದರೇತರೋದರಂ ವರಂ ವರೇಭವಕ್ತ್ರಮಕ್ಷರಮ್ ।
ಕೃಪಾಕರಂ ಕ್ಷಮಾಕರಂ ಮುದಾಕರಂ ಯಶಸ್ಕರಂ
ಮನಸ್ಕರಂ ನಮಸ್ಕೃತಾಂ ನಮಸ್ಕರೋಮಿ ಭಾಸ್ವರಮ್ ॥

ಎಲ್ಲಾ ಲೋಕಗಳಿಗೂ ಒಳ್ಳೆಯದನ್ನು ಮಾಡುವ, ಗಜಾಸುರನನ್ನು ನಿರ್ಮೂಲ ಮಾಡಿದ, ವಿಶಾಲವಾದ ಹೊಟ್ಟೆಯನ್ನು ಹೊಂದಿರುವ, ದೊಡ್ಡದಾದ ಆನೆಯ ಮುಖ ಹೊಂದಿರುವ, ನಾಶರಹಿತನಾದ, ಕರುಣಾಕರನಾದ, ಸಹನಾಗುಣವುಳ್ಳ, ಸಂತೋಷವನ್ನೂ ಕೀರ್ತಿಯನ್ನೂ ಉಂಟುಮಾಡುವ, ನಮಸ್ಕರಿಸಿದವರ ಮನಸ್ಸಿನಲ್ಲಿರುವುದನ್ನು ನೆರವೇರಿಸುವ ಆ ತೇಜೋಮಯನನ್ನು ನಮಸ್ಕರಿಸುತ್ತೇನೆ.

ನಿತಾಂತಕಾಂತದಂತಕಾಂತಿಮಂತಕಾಂತಕಾತ್ಮಜಂ
ಅಚಿಂತ್ಯರೂಪಮಂತಹೀನಮಂತರಾಯಕೃಂತನಮ್ ।
ಹೃದಂತರೇ ನಿರಂತರಂ ವಸಂತಮೇವ ಯೋಗಿನಾಂ
ತಮೇಕದಂತಮೇವ ತಂ ವಿಚಿಂತಯಾಮಿ ಸಂತತಮ್ ॥

ಅತಿಯಾದ ಕಾಂತಿಯಿಂದ ಕೂಡಿದ ದಂತವುಳ್ಳ, ಯಮನಿಗೂ ಯಮನಾದ, ಶಿವನ ಮಗನಾದ, ಮನಸ್ಸಿಗೆ ನಿಲುಕದ ರೂಪವುಳ್ಳ, ನಾಶರಹಿತನಾದ, ವಿಘ್ನಗಳನ್ನು ಕಳೆಯುವ, ಯೋಗಿಗಳ ಹೃದಯದಲ್ಲಿ ಸದಾ ವಾಸಿಸುವ, ಒಂದೇ ದಂತವುಳ್ಳ ಆ ದೇವನನ್ನು ಸದಾ ನೆನೆಯುತ್ತೇನೆ.

## ಸೂಕ್ತಿಪ್ರಭ



- ಅವಿರತ ವಿಶ್ರಾಂತಿಯಿಂದ ಸ್ವರ್ಗವು ಧನ್ಯವಾಗಿದ್ದರೆ, ಈ ಭುವಿಯನ್ನು ಕಾಯಕವೇ ಧನ್ಯಗೊಳಿಸಿದೆ.
  — *ಹೆನ್ರಿ ವಾನ್ ಡೈಕ್*

- ವ್ಯಕ್ತಿಯು ಕೆಲಸವನ್ನು ಮಾಡದಿದ್ದರೆ, ಊಟವನ್ನೂ ಮಾಡಬಾರದು. — *ನ್ಯೂ ಟೆಸ್ಟಮೆಂಟ್*

- ಪರಿಶ್ರಮದಿಂದಲೇ ಸುಖ ಎಂಬುದನ್ನು ನಾನು ಸದಾ ಕಂಡುಕೊಂಡಿದ್ದೇನೆ. —*ಡೇವಿಡ್ ಗ್ರೇಸನ್*

- ವೇದ, ಲೋಕಾಚಾರ, ನಿನ್ನನುಭವದ ಯುಕ್ತಿ
  ಶೋಧಿಸೀ ಮೂರನು ಸಂವಾದಗೊಳಿಸು ।
  ಸಾಧಿತ ಜ್ಞಾನ ನರಸಾಧ್ಯ ಪ್ರಮಾಣವದು
  ಹಾದಿ ಬೆಳಕದು ನಿನಗೆ – ಮಂಕುತಿಮ್ಮ ॥
  —*ಡಿ.ವಿ.ಜಿ.*

- ವಸ್ತುಗಳಿಂದ ನಾವು ಬಂಧನಕ್ಕೊಳಗಾಗುವುದಿಲ್ಲ, ಅವುಗಳಲ್ಲಿರುವ ಆಸಕ್ತಿ ಮತ್ತು ಜುಗುಪ್ಸೆ, ತಾತ್ಸಾರಗಳೇ ಬಂಧನಕ್ಕೆ ಕಾರಣ. —*ಜೈನ ಸೂಕ್ತಿ*

- ಇಡೀ ಜಗತ್ತು ಹಾಗೂ ಅದರಲ್ಲಿನ ಎಲ್ಲ ಐಶ್ವರ್ಯವನ್ನು ನಿನಗೆ ಕೊಟ್ಟರೂ ನಿನ್ನ ಆಸೆ ತೃಪ್ತಿಗೊಳ್ಳುವುದಿಲ್ಲ. ಅಷ್ಟೇ ಅಲ್ಲ, ಅವು ನಿನ್ನನ್ನು ಕಾಪಾಡುವುದೂ ಇಲ್ಲ. —*ಜೈನ ಸೂಕ್ತಿ*

- ಆಸಕ್ತಿ ಭ್ರಮೆಯನ್ನು ಸೃಷ್ಟಿಸುತ್ತದೆ. ವಾಸ್ತವವನ್ನು ಬಯಸುವವರು ನಿರಾಸಕ್ತರಾಗಲೇಬೇಕು. —*ಸೀಮೋನ್ ವೈಲ್*

- ಕುದುರೆಯನ್ನು ಅದರ ವೇಗದಿಂದ, ಎತ್ತನ್ನು ಅದರ ಭಾರ ಹೊರುವ ಸಾಮರ್ಥ್ಯದಿಂದ, ಹಸುವನ್ನು ಅದು ಕೊಡುವ ಹಾಲಿನಿಂದ ಹಾಗೂ ಮಾನವನನ್ನು ಅವನು ಆಡುವ ನುಡಿಯಿಂದ ತಿಳಿಯಬೇಕು.

- ಇತರರ ವಿಚಾರಗಳಿಂದ ನಾವು ವಿಚಾರವಂತರಾಗಬಹುದು, ಆದರೆ ಬೇರೆಯವರ ಜ್ಞಾನದಿಂದ ನಾವು ಜ್ಞಾನಿಗಳಾಗುವುದಿಲ್ಲ.

- ನಾವು ಎಷ್ಟು ಕಾಲ ಜೀವಿಸಿದೆವು ಎಂಬುದು ಮುಖ್ಯವಲ್ಲ, ಈ ಅಲ್ಪ ಅವಧಿಯಲ್ಲಿ ಎಷ್ಟು ಸಾಧಿಸಿದೆವು ಎಂಬುದು ಮುಖ್ಯ.
  —*ಜವಹರಲಾಲ ನೆಹರೂ*

- ಈ ಜಗತ್ತಿನಲ್ಲಿ ಎಲ್ಲವೂ ನಾಶವಾಗುವುದು. ಚಿಂತನೆಗಳು, ಆದರ್ಶಗಳು ಹಾಗೂ ಕನಸುಗಳು ಮಾತ್ರ ಉಳಿಯುವುವು
  —*ಸುಭಾಷ್ ಚಂದ್ರ ಬೋಸ್*

- ನೀವು ಏನಾಗಿದ್ದೀರೊ ಅದನ್ನು ಬಿಟ್ಟು ಬೇರೆಯಾಗಲು ಬಯಸಬೇಡಿ. ಅದರಲ್ಲೇ ಪೂರ್ಣತೆ ಗಳಿಸಿ.
  —*ಸಂತ ಫ್ರಾನ್ಸಿಸ್ ಡಿ ಸೇಲ್ಸ್*

- ಯಾರು ದುಂದು ವೆಚ್ಚದಲ್ಲಿ ತೊಡಗುತ್ತಾನೋ, ಅವನು ಶೀಘ್ರದಲ್ಲೇ ಬಡವನಾಗುತ್ತಾನೆ. ಬಡತನ ಪರಾಧೀನತೆಯನ್ನೂ, ಭ್ರಷ್ಟಾಚಾರವನ್ನೂ ತರುತ್ತದೆ. —*ಸ್ಯಾಮ್ಯುಯಲ್ ಜಾನ್ಸನ್*

- ಅತ್ಯಂತ ಸಮರ್ಪಕವಾದ ಪಥ್ಯವನ್ನು ನೀವು ಕೇವಲ ನಾಲ್ಕು ಪದಗಳಿಂದ ಸಾಧಿಸಬಹುದು: 'ಇಷ್ಟೇ ಸಾಕು, ಇನ್ನು ಬೇಡ.'
  —*ಕೇಟ್ ಸ್ಮಿತ್*

- ಸಮಸ್ಯೆಗಳು ಎದುರಾದಾಗ ನೆನಪಿಡಿ: ಉಜ್ಜಿದಾಗ ಮಾತ್ರ ಹೊಳಪು ಬರುವುದು ಎಂಬುದನ್ನು. —*ವಾಷಿಂಗ್ಟನ್ ಇರ್ವಿಂಗ್*